ಉದುರಿಯೇಬಿಟ್ಟವು, ಅಂದಿನ ಜೋರು ಮಳೆಯಂತೆ. ದುಪ್ಪಟದಿಂದ ಕಣ್ಣೋರೆಸಿಕೊಳ್ಳುತ್ತಾ ತಡೆಯಲು ಮಾಡಿದ ಪ್ರಯತ್ನವೆಲ್ಲ ವ್ಯರ್ಥವಾಗಿ, ಕೊನೆಗೆ ಜೋರಾಗಿ ಬಿಕ್ಕಿಬಿಕ್ಕಿ ಅಳಲು ಶುರುಮಾಡಿದಾಗ, ನಾನು ಕೇವಲ ಪ್ರೇಕ್ಷಕಿಯಾಗಿದ್ದೆ. ನಾಲ್ಕು ಟೇಬಲ್ಲಿನಾಚೆ ಕುಳಿತಿದ್ದವರು ತಿರುತಿರುಗಿ ಅವಳತ್ತ ನೋಡತೊಡಗಿದರು. ನೋಡಿದವರು ಯಾಕೆಂದು ಕೈ ಸನ್ನೆ ಮಾಡಿ ನನ್ನನ್ನು ಕೇಳತೊಡಗಿದರು. ಏನೆಂದು ಉತ್ತರಿಸಲಿ? ಅವಳಿಗೆ ಒಂದು ಸಮಾಧಾನದ ಮಾತನ್ನು ಹೇಳಲಾಗದಷ್ಟು ನನಗೆ ಶಾಕ್ ಆಗಿತ್ತು. ಅವಳು ದಿನ ಪೂರ್ತಿ ಅಳುತ್ತಲೇ ಇದ್ದಳು. ನನಗಂತು 'ಯಾಕಾದರೂ ಅವಳ ಗತವನ್ನು ಕೆದಕಿದೆನೋ' ಎನಿಸಿತು.

ಮತ್ತೆ ಇಪ್ಪತ್ನಾಲ್ಕು ಗಂಟೆ ಮುಗಿದ ಮೇಲೆ ಎದುರುಬದಿರಾಗಿ ಕುಳಿತಾಗ, "ಬೇಡರೀ... ನಿಮ್ಗೆ ನೋವಾಗುವಂತಿದ್ರೆ ಏನು ಹೇಳ್ಬೇಡಿ" ಎಂದೆ. ಅವಳ ಕಣ್ಣಿನ ರೆಪ್ಪೆ ಊದಿರುವುದು ಚೆನ್ನಾಗಿ ಕಾಣುತ್ತಿದ್ದರಿಂದ, ಮತ್ತೆ ಕಣ್ಣೀರು ಹಾಕಿಸುವುದು ಬೇಡ ಎನಿಸಿತು ಆ ಕ್ಷಣ. "ಅಳಕ್ಕೆ ಕಣ್ಣೀರೆ ಇಲ್ಲಾ ರಿ. ನಿನ್ನೆ ಅದ್ಹೇಗೆ ಬಂತೋ ಗೊತ್ತಿಲ್ಲ" ಎಂದವಳು ತನ್ನ ಬಯಾಗ್ರಫಿಯನ್ನು ಮುಂದುವರಿಸಿದಳು. "ನಾನು ಓಕೆನಾ, ಇಲ್ಲಾ ಅವ್ನು ಓಕೆನಾ ಎನ್ನುತ್ತಿದ್ದ ನನ್ನ ಗಂಡನ ಮಾತಿಗೆ ಏನೆಂದು ಉತ್ತರಿಸಲಿ?" ಎಂದವಳ ಮಾತು ಕೇಳಿ ನನ್ನ ಕಣ್ಣು ದೊಡ್ಡದಾಗಿ ತೆರೆದುಕೊಂಡಿತು. "ಎಲ್ಲಿದ್ದೀನಿ, ಹೇಗೆ ಬಂದೆ, ಯಾವ ಸ್ಥಿತಿಯಲ್ಲಿ ಬಂದೆ ಎಂದು ತಿಳಿಯದ ಸ್ಥಿತಿಯಲ್ಲಿ ನಾನಿದ್ದೆ. ಒಂದು ರೀತಿ ಅರೆಹುಚ್ಚಿಯಂತಿದ್ದೆ. ಅಮ್ಮ 'ಏನಾಯ್ತೆ ಚಿನ್ನು?' ಎಂದು ಅಲುಗಿಸಿ ಕೇಳುತ್ತಿದ್ದರೆ ನನ್ನ ಬಾಯಿಂದ ಮಾತು ಬರುತ್ತಿಲ್ಲ. ಎಷ್ಟೇ ಪ್ರಯತ್ನಪಟ್ಟರೂ ನನ್ನ ಮೈನಡುಕವನ್ನು ನಿಯಂತ್ರಿಸಲು ಆಗುತ್ತಿಲ್ಲ. ಅಪ್ಪಅಮ್ಮ ವಿಧವಿಧವಾಗಿ ಕೇಳುತ್ತಿದ್ದರೂ ನನಗೆ ಮಾತಾಡಲು ಆಗುತ್ತಿಲ್ಲ. ನಾನು ಈ ಸ್ಥಿತಿಯಲ್ಲಿರುವಾಗಲೇ ಅತ್ತೆಯ ಕಂಚಿನಕಂಠ ಮನೆಯಲ್ಲಿ ಮೊಳಗಿತು. "ಯಾವ್ನೊನೊಂದ್ಗೊ ಇದ್ದಿದ್ನಾ ನನ್ಮಗ ನೋಡುದ್ನಂತೆ. ಸಿಕ್ಕುದ್ರೆ ಬುಟ್ಟನೆಂತಾ, ಉಟ್ಬಟ್ಟೆಲೇ ಓಡ್ಬಂದವ್ಳೆ" ಎಂದು ಅತ್ತೆಯ ಮಾತು ಕೇಳಿ ಹೃದಯ ಬಡಿತವೇ ನಿಂತಂತೆ ಆಯಿತು. ಅಪ್ಪ ನನ್ನತ್ತ ದುರುಗುಟ್ಟಿಕೊಂಡು, ಅಮ್ಮ ಪ್ರಶ್ನಿಸುವಂತೆ ನನ್ನತ್ತ ನೋಡಿದರು. ನಾನು 'ಇಲ್ಲ' ಎಂದು ತಲೆಯಲ್ಲಾಡಿಸಲೂ ಆಗದ ಸ್ಥಿತಿಯಲ್ಲಿದ್ದೆ. ಅತ್ತೆ ತನ್ನ ಕಂಚಿನಕಂಠ ಮೊಳಗಿಸುತ್ತಲೇ ತನ್ನ ದೊಡ್ಡಣ್ಣನ ಮನೆಗೆ ಹೋದಳು.

ನನ್ನನ್ನು ನಾನು ನಿಯಂತ್ರಿಸಿಕೊಂಡು ಬಿಕ್ಕುತ್ತಾ ಅಮ್ಮನ ಕಿವಿಯಲ್ಲಿ ವಿಷಯ ಹೇಳುವಷ್ಟರಲ್ಲಿ ಪರಿಸ್ಥಿತಿ ಕೈ ಮೀರಿ ಹೋಗಿತ್ತು. ಅಷ್ಟೊಂದು ಪ್ರೀತಿಸುತ್ತಿದ್ದ ಅಪ್ಪ, ನನ್ನನ್ನು ನಂಬದೆ, ನಾನು ಅವರ ಮುಖಕ್ಕೆ ಮಸಿಬಳಿದೆನೆಂದು ಆತ್ಮಹತ್ಯೆ ಮಾಡಿಕೊಂಡುಬಿಟ್ಟರು. ಆ ಎರಡು ಮೂರು ತಿಂಗಳು ನಾನು ಹೇಗಿದ್ದೆ ಎಂದು ತಿಳಿಯದು. ನನ್ನ ಬಳಿ ಕೆಟ್ಟ ವಾಸನೆ ಬರುತ್ತಿದ್ದುದನ್ನು ಕಂಡ ಅಮ್ಮ ನನಗೆ ಗರ್ಭಪಾತ ಆಗಿದೆಯೆಂದು ತಿಳಿದು ಆಸ್ಪತ್ರೆಗೆ ಕರೆದುಕೊಂಡು ಹೋಗಿ ಕ್ಲೀನ್ ಮಾಡಿಸಿದರಂತೆ. ಮತ್ತೆ ಅಲ್ಲೆ ನನ್ನ ಅರೆಹುಚ್ಚಿಗೂ ಔಷಧಿ ಕೊಡಿಸಿದರಂತೆ. ನಾನು ಸರಿಯಾಗಲು, ಊರಿನಲ್ಲೆ ಇದ್ದರೆ ಆ ನೆನೆಪು ಕಾಡುತ್ತವೆಯೆಂದು ತಿಳಿದು, ದೊಡ್ಡಮ್ಮನ ಸಲಹೆಯ ಮೇರೆಗೆ ಅವರ ಮಗನ ಮನೆಗೆ ಅಂದರೆ ಇಲ್ಲಿಗೆ ಕಳುಹಿಸಿದರು. ದೊಡ್ಡಪ್ಪನ ಮಗ, ಮಗಳು ಇಲ್ಲೇ ಒಂದು ರೂಮ್ ಬಾಡಿಗೆ ಪಡೆದು, ಕೆಲಸಕ್ಕೆ ಹೋಗುತ್ತಿದ್ದರು. ನಾನು ಅಣ್ಣ ಮತ್ತು ಅಕ್ಕನ ರೂಮ್‌ಗೆ ಹೊಸ ಸದಸ್ಯೆಯಾಗಿ, ಅವರು ಕೆಲಸ ಮಾಡುವ ಕಂಪೆನಿಯಲ್ಲಿ ಟ್ರೈನಿಂಗ್ ಟೈಲರ್ ಆಗಿ ಕೆಲಸಕ್ಕೆ ಸೇರಿಕೊಂಡೆ" ಎಂದು ತನ್ನ ಆ ದಿನದ ಕಂತು ಮುಗಿಸಿದಳು.

ಮೌನವಾಗಿ ಊಟ ಮಾಡುತ್ತಿದ್ದವಳಿಗೆ, "ನಾನು ಒಂದು ಪ್ರಶ್ನೆ ಕೇಳುದ್ರೆ ನೀವೇನು ಅಂದ್ಕೊಳಲ್ವಾ?" ಎಂದೆ. ಅವಳು ಮೆಲ್ಲಗೆ ನಗುತ್ತಾ, "ಏನಾದ್ರೂ ಅಂದ್ಕೊಳ್ಳುವಂತ ಪ್ರಶ್ನೆನೆಲ್ಲ ಆಗ್ಲೆ